ಓ ಎಸ್ ನಂಃ 92-18
ಪಿ ಡಬ್ಲ್ಯೂ ಃ 1

**ದಿಃ 20-03-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 7 ರವರ ಪರವಾಗಿ ಶ್ರೀ ಹೆಚ್ ಎನ್ ಎಸ್ ವಕೀಲರಿಂದ**

11. ನಾನು ಮಂಡ್ಯದ ಹೋಟೆಲ್‌ನಲ್ಲಿ 15-20 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನಾನು ಮಂಡ್ಯಗೆ ಹೋದಾಗ ನನಗೆ 5 ವರ್ಷ ವಯಸ್ಸಾಗಿರುತ್ತದೆ. ನಾನು 3 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಮಂಡ್ಯಾದ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ.

12. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಸದರಿ ದಾಖಲಾತಿಯನ್ನು ಸಾಕ್ಷಿಗೆ ಸದರಿ ದಾಖಲಾತಿ ಸಾಕ್ಷಿಗೆ ಸಂಬಂದಪಟ್ಟ ದಾಖಲಾತಿ ಎಂದು ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ತನಗೆ ಸೇರಿದ ವ್ಯಾಸಂಗ ಪ್ರಮಾಣ ಪತ್ರ ಎಂದು ಗುರುತಿಸಿದ್ದು ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ನಾನು ವಾಸಮಾಡುತ್ತಿರುವ ಸ್ಥಳ ನಿಡಿ 1 ಮತ್ತು 2 ರಲ್ಲಿ ಕ್ರಿಶ್ಚಿಯನ್ ಕಾಲೋನಿ ಮಂಡ್ಯ ಎಂದು ಇರುತ್ತದೆ ಎಂದು ಇರುತ್ತದೆ ಎಂದರೆ ಸರಿ. ನಾನು ಹುಟ್ಟಿದ ದಿನಾಂಕಃ 03-01-1967 ಎಂದರೆ ಗೊತ್ತಿಲ್ಲ.

13. ನಾನು ಸದರಿ ದಾವೆಯನ್ನು ಭಾಗಕ್ಕಾಗಿ ಹೂಡಿರುತ್ತೇನೆ. ನಾನು ಸದರಿ ದಾವೆಯನ್ನು 2 ಜಮೀನುಗಳ ಮೇಲೆ ಹಾಡಿರುತ್ತೇನೆ. ನಾನು 9/2 ರಲ್ಲಿ 3 ಎಕರೆ 35 ಗುಂಟೆ ಜಮೀನು ನನ್ನ ತಾತನಿಗೆ ಬಂದಿರುತ್ತದೆ ಅದರ ಮೇಲೆ ನಾನು ಈ ದಾವೆಯನ್ನು ಹೂಡಿರುತ್ತೇನೆ. ನಾನು ಸರ್ವೆ ನಂ 37/5 ರಲ್ಲಿ ನನ್ನ ತಾತನಿಗೆ ಬಂದಂತಹ 3 ಎಕರೆ 4 ಗುಂಟೆ ಜಮೀನಿನ ಮೇಲೆ ದಾವೆಯನ್ನು ಹೂಡಿರುತ್ತೇನೆ. ಸರ್ವೆ ನಂ 9/2 ಪೋಡಿಯಾಗಿರುತ್ತದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸರ್ವೆನಂ 9/2 ಈಗ ನಾಲ್ಕು ಪೋಡಿಗಳಾಗಿರುತ್ತವೆ ಎಂದರೆ ಗೊತ್ತಿಲ್ಲ. ನಿಪಿ 6 ರಿಂದ 9 ರಲ್ಲಿ ಸರ್ವೆ ನಂ 9/2 ಎ ರಿಂದ 9/2 ಡಿ ವರೆಗೂ ಪೋಡಿಯಾಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಯಾವ ಯಾವ ಸ್ವತ್ತಿನಲ್ಲಿ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಗೊತ್ತಿಲ್ಲ.

14. ಸರ್ವೆ ನಂ 35/2 ರ ಮೂಲ ಸರ್ವೆ ನಂ 37/2 ಆಗಿರುತ್ತದೆ ಎಂದರೆ ಸರಿ. ಸರ್ವೆ ನಂ 37/2 ರಲ್ಲಿ 3 ಎಕರೆ 4 ಗುಂಟೆ ಜಮೀನು ಇತ್ತು ಎಂದರೆ ಸರಿ. ನನ್ನ ತಂದೆಯವರು ಸರ್ವೆನಂ 37/2 ರಲ್ಲಿ 16 ಗುಂಟೆ ಜಮೀನನ್ನು ವೆಂಕಟರಾಮಯ್ಯರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ

37/2 ಉಳಿಕೆ 2 ಎಕರೆ 28 ಗುಂಟೆ ಜಮೀನು ಶಾಂತಮ್ಮರವರ ಅಂದರೆ 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸಾಕ್ಷಿಯು ಅವರು ಹೇಗೆ ಮಾಡಿಕೊಂಡಿರುತ್ತಾರೋ ಗೊತ್ತಿಲ್ಲ ಎಂದು ಹೇಳಿ ಅವರು ನನ್ನ ಅತ್ತಿಗೆ ಆಗಬೇಕು ಎಂದು ನುಡಿಯುತ್ತಾರೆ. ನಿಪಿ 18 ರ ಪ್ರಕಾರ ನನ್ನ ತಂದೆ ಸರ್ವೆ ನಂ 37/2 ರಲ್ಲಿ 16 ಗುಂಟೆ ಮಾರಾಟ ಮಾಡಿದ ನಂತರ ವೆಂಕಟರಮಣಯ್ಯರವರ ಹೆಸರು ಬರುತ್ತಿದೆ ಎಂದರೆ ನಮ್ಮ ತಂದೆ ಮಾರಾಟ ಮಾಡಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ 37/2 ರಲ್ಲಿ ಈಗ ಶಾಂತಮ್ಮರವರ ಹೆಸರಿನಲ್ಲಿ ಪೋಡಿಯಾಗಿ ಖಾತೆಯಾಗಿರುತ್ತದೆ ಎಂದರೆ ಸರಿ ನಮಗೆ ಗೊತ್ತಿಲ್ಲದೇ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

15. ನನ್ನ ಕುಟುಂಬದ ದೊಡ್ಡನರಸಯ್ಯ ಎಂದರೆ ಸರಿ. ದೊಡ್ಡನರಸಯ್ಯರವರಿಗೆ ನನ್ನ ತಂದೆ ಚಿಕ್ಕಯ್ಯ, 1 ನೇ ಲಿಂಗಯ್ಯ ರವರು ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ನನ್ನ ತಾತನಿಗೆ ಹೆಣ್ಣು ಮಕ್ಕಳು ಇರಲಿಲ್ಲ. ನನ್ನ ತಾತನಿಗೆ ಲಿಂಗಮ್ಮ ಮತ್ತು ಬೋರಮ್ಮ ಎನ್ನುವ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದರೆ ಗೊತ್ತಿಲ್ಲ. ಲಿಂಗಮ್ಮರವರನ್ನು ಬೆಳಗವಾಡಿಗೆ ಮತ್ತು ಬೋರಮ್ಮರವರನ್ನು ದಂಡಿಗೆಪುರಕ್ಕೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ಗೊತ್ತಿಲ್ಲ.

16. ನನ್ನ ದೊಡ್ಡಪ್ಪ ಲಿಂಗಯ್ಯರವರ ಹೆಂಡತಿ ಚಿಕ್ಕನರಸಮ್ಮ 1 ನೇ ಪ್ರತಿವಾದಿ ಎಂದರೆ ಸರಿ. ಅವರಿಗೆ ಒಬ್ಬನೇ ಮಗ ಶಿವಲಿಂಗಯ್ಯ ಎಂದರೆ ಸರಿ. ಶಿವಲಿಂಗಯ್ಯರವರಿಗೆ ಮದುವೆಯಾಗಿದ್ದು ಅವರ ಮೊದಲನೇ ಹೆಂಡತಿಯ ಮಗಳು ಪುಟ್ಟತಾಯಮ್ಮ ಎಂದರೆ ಸರಿ. ಶಿವಲಿಂಗಯ್ಯರವರು ಮೊದಲನೇ ಹೆಂಡತಿ ತೀರಿಕೊಂಡ ನಂತರ 2 ನೇ ಮದುವೆ ಪ್ರತಿವಾದಿ 2 ರವರೊಂದಿಗೆ ಆಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ 2 ರವರಿಗೆ 3 ಜನ ಮಕ್ಕಳು ಎಂದರೆ ಸರಿ. ಶಿವಲಿಂಗಯ್ಯರವರ ಮೊದಲನೇ ಹೆಂಡತಿಯ ಮಗಳನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

17. ನನ್ನ ತಾಯಿಯ ಹೆಸರು ನಂಜಮ್ಮ. ನನ್ನ ತಂದೆಗೆ 4 ಜನ ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗಳು ಇರುತ್ತಾರೆ. ನನ್ನ ತಂದೆಯ 1 ನೇ ಮಗ ದಿವಂಗತ ಲಿಂಗಣ್ಣ, 2 ನೇ ನಾನು, 3 ನೇ ದಿವಂಗತ ನರಸಿಂಹಮೂರ್ತಿ, 4 ನೇ ಶಶಿಕುಮಾರ ಮತ್ತು 5 ನೇ ದಿವಂಗತ ಮೀನಾ ಆಗಿರುತ್ತಾರೆ. ದಿವಂಗತ ಲಿಂಗಣ್ಣರವರು ಮದುವೆಯಾಗದೇ ತೀರಿಕೊಂಡಿರುತ್ತಾರೆ. ದಿವಂಗತ ನರಸಿಂಹಮೂರ್ತಿರವರು ಸಹ ಮದುವೆಯಾಗದೇ ತೀರಿಕೊಂಡಿರುತ್ತಾರೆ. ದಿವಂಗತ ಮೀನಾರವರಿಗೆ ಮದುವೆಯಾಗಿದ್ದು, ಅವರಿಗೆ ಒಂದು ಹೆಣ್ಣು ಮಗು ಇರುತ್ತದೆ ಅವರು ಎಲ್ಲಿ ಇರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಂದೆ ಚಿಕ್ಕಯ್ಯರವರಿಗೆ ಸರೋಜಮ್ಮ ಎಂಬ ಮಗಳು ಇದ್ದರು ಎಂದರೆ ಸರಿ. ಅವರು ಬದುಕಿರುತ್ತಾರೆ ಎಂದರೆ ಸರಿ. ನಾನು ಮೀನಾರವರ ಮಗಳನ್ನು ಮತ್ತು ಸರೋಜಮ್ಮರವರನ್ನು ಪ್ರಸ್ತುತ ದಾವೆಯಲ್ಲಿ ಪಕ್ಷಗಾರರನ್ನಾಗಿ

ಮಾಡಿರುವುದಿಲ್ಲ ಎಂದರೆ ಸರಿ. ಅವರನ್ನು ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರುವುದಿಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**